ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ದಿನಾಂಕ 25.10.2021 ರಂದು ಆದ ಸ್ವಾಧೀನ ರಹಿತ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ನಿಪಿ-1 ರಲ್ಲಿ ಇರುವ ಎಲ್ಲಾ ಪುಟಗಳಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕೂನೆಯ ಪುಟದಲ್ಲಿ ಇ ರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಸಾಕ್ಷಿ ನಿಪಿ-1 ರ ಎಲ್ಲಾ ಪುಟಗಳಲ್ಲಿ ಇರುವ ಪ್ರತಿವಾದಿಗಳ ಸಹಿಗಳನ್ನು ನೋಡಿ ಗುರುತಿಸಿದ್ದು, ಪ್ರತಿವಾದಿಗಳ ಸಹಿಗಳನ್ನು ಕೊನೆಯ ಪುಟದಲ್ಲಿ ನಿಪಿ-1(ಬಿ) ಮತ್ತು ನಿಪಿ-(ಸಿ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ಬರೆದುಕೊಟ್ಟ ಷರಾ ವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಪ್ರತಿವಾದಿಗಳ ಸಹಿಗಳನ್ನು ನಿಪಿ-2(ಬಿ) ಮತ್ತು ನಿಪಿ-2(ಸಿ) ಎಂದು, ಒಂದು ನೋಂದಾಣಿ ಶುಲ್ಕ ಪಾವತಿಸಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಒಂದು ಇಸಿಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ದಿನಾಂಕ 07.12.2022 ರಂದು ವಕೀಲರ ಮೂಲಕ ಪ್ರತಿವಾದಿಗಳಿಗೆ ನೀಡಿದ ತಿಳುವಳಿಕೆ ನೋಟಿಸ್ ಕಛೇರಿ ಪ್ರತಿಯನ್ನು ನಿಪಿ-5 ಎಂದು, ನೋಟಿಸು ಕಳುಹಿಸಿದ ಬಗ್ಗೆ 2 ಅಂಚೆ ರೇಶಿದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-6 ಮತ್ತು ನಿಪಿ-7 ಎಂದು, ದಿನಾಂಕ 31.12.2022 ರಂದು ಪ್ರತಿವಾದಿಗಳು ನೀಡಿರುವ ಎರಡು ಪ್ರತ್ಯೂತ್ತರ ನೋಟಿಸ್ ಗಳಸನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.